## ಸಾಯಿಸಿಬಿಡ್ತಾರೆ

ಗೆಳತಿ ಚಿತ್ರಾ ತನ್ನ ಪುಟ್ಟ ಮಗಳು 'ಸಂಸ್ಕೃತಿ' ಜೊತೆಗೆ ಔಷಧಿ ತರಲು ಹೋದಾಗ ನಡೆದ ಘಟನೆ ಇದು. ಅಂಗಡಿ ಮೆಟ್ಟಿಲು ಹತ್ತಲು ಬಿಡದಂತೆ ಮಗಳು ಕೈ ಹಿಡಿದು ಜಗ್ಗುತ್ತಲೇ ಇದ್ದಳು. ಅವಳು ಆ ಔಷಧ ಅಂಗಡಿಯ ಮೇಲೆ ಬರೆದ ಬೋರ್ಡಿನ ಕಡೆಯೇ ನೋಡುತ್ತಿದ್ದಳು. 'ಅಮ್ಮಾ, ಬೇಡಮ್ಮ, ಸಾಯಿಸಿಬಿಡ್ತಾರೆ... ಬೇಡಮ್ಮ ಅಲ್ಲಿ ಹೋಗೋದು' ಅಂತ ಅಳು ಮುಖ ಮಾಡಿದಳು. ಮಗಳ ಮಾತು ಕೇಳಿದ ಚಿತ್ರಾ ಗಾಬರಿ ಹಾಗೂ ಸಿಟ್ಟಿನಿಂದ ಅವಳು ತೋರಿಸುತ್ತಿದ್ದ ಔಷಧ ಅಂಗಡಿಯ ಮೇಲೆ ಬರೆದ ಬೋರ್ಡ್ ನೋಡಿದಳು. 'ಸಾಯಿಸಿರಿ ಮೆಡಿಕಲ್ ಶಾಪ್' ಎಂದು ಬರೆದಿದ್ದು ಓದಿ ನಕ್ಕು ಬಿಟ್ಟಳು.

**ಇಂದಿರಾ ಮೋಟೆಬೆನ್ನೂರ**



---



ಕಲೆ: ಗಣೇಶ ಆಚಾರ್ಯ

## ಹೆಸ್ರಯೋಳಕಾಗ್ದ ನಾಯ್ಕ

ನಮ್ಮ ಪಕ್ಕದ ಮನೆಯಲ್ಲಿ ರಾಯಚೂರಿನ ಕಾರ್ಮಿಕರ ಕುಟುಂಬವೊಂದು ವಾಸವಾಗಿತ್ತು. ಅವರ ಮನೆಗೆ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರಿಸಲು ಗ್ರಾಮ ಪಂಚಾಯತಿಯ ಗುಮಾಸ್ತೆ ಬಂದಿದ್ದರು. ಮನೆಯಲ್ಲಿ ಮಹಿಳೆ ಮಾತ್ರ ಇದ್ದಳು. ವಿವರಗಳನ್ನು ಅವಳೇ ನೀಡಿದಳು. ಕೆಲವು ದಿನಗಳ ಬಳಿಕ ಮಹಿಳೆ ಮತ್ತು ಅವಳ ಗಂಡನ ಗುರುತಿನ ಚೀಟಿ ಕೈಸೇರಿತು. ಅದರಲ್ಲಿ ಮಹಿಳೆಯ ಗಂಡನ ಹೆಸರು ತಪ್ಪಾಗಿತ್ತು. ನರಸಿಂಹ ನಾಯ್ಕ ಎನ್ನುವ ಹೆಸರಿಗೆ ಬದಲು 'ಹೆಸ್ರಯೋಳಕಾಗ್ದ ನಾಯ್ಕ' ಎಂದು ದಾಖಲಾಗಿತ್ತು. ಹಳೆಯ ಕಾಲದವಳಾದ ಅವನ ಹೆಂಡತಿ ಗಂಡನ ಹೆಸರು ಏನೆಂದು ಕೇಳಿದಾಗ ಹೆಸರು ಹೇಳಲಿಕ್ಕಾಗದೆ, 'ಹೆಸ್ರಯೋಳಕಾಗ್ದ ನಾಯ್ಕ' ಎಂದು ಹೇಳಿದ್ದಳು. ಗುಮಾಸ್ತೆ ಅದೇ ಹೆಸರೆಂದು ತಿಳಿದು ಸೇರಿಸಿಬಿಟ್ಟಿದ್ದಳು.

**ಪ. ರಾಮಕೃಷ್ಣ ಶಾಸ್ತ್ರಿ**